First Cover

# ನೀನಾಸಮ್
# ಸಂಸ್ಕೃತಿ ಶಿಬಿರ

## ಕಾರ್ಯಕ್ರಮಗಳಿಗೆ
## ಸ್ವಾಗತ

ಸ್ಥಳ: ಶಿವರಾಮ ಕಾರಂತ ರಂಗಮಂದಿರ, ಹೆಗ್ಗೋಡು

ಸಮಯ: ಪ್ರತಿದಿನ ಸಂಜೆ ೭ ಗಂಟೆ

ಪ್ರವೇಶ:

ರೂ. ೧೦೦ (ಎಲ್ಲ ದಿನಕ್ಕೆ)

ರೂ. ೧೫, ರೂ. ೧೦ (ಪ್ರತಿದಿನ)

Second Cover

## ನೀನಾಸಮ್ ಸಂಸ್ಕೃತಿ ಶಿಬಿರ
## ಅಕ್ಟೋಬರ್ ೨೦೦೨

೧೯೭೯ರಿಂದ ಸತತವಾಗಿ ನೀನಾಸಮ್ ಪ್ರತಿ ಅಕ್ಟೋಬರಿನಲ್ಲಿ ಚಲನಚಿತ್ರ-ಸಂಸ್ಕೃತಿ ಶಿಬಿರಗಳನ್ನು ನಡೆಸುತ್ತ ಬಂದಿದೆ. ಈ ವರ್ಷದ ಸಂಸ್ಕೃತಿ ಶಿಬಿರವೂ ಅದೇ ಮಾದರಿಯಲ್ಲಿ ಯೋಜಿತವಾಗಿದೆ. ಈ ಶಿಬಿರದಲ್ಲಿ ರಂಗಭೂಮಿ, ಸಾಹಿತ್ಯ, ಸಂಗೀತ, ನೃತ್ಯ, ಚಲನಚಿತ್ರ ಮುಂತಾದ ಸಾಂಸ್ಕೃತಿಕ ಮಾಧ್ಯಮಗಳ ಸ್ವರೂಪ, ವಿಮರ್ಶೆ, ಈ ಮಾಧ್ಯಮಗಳ ಪರಸ್ಪರ ಸಂಬಂಧ ಹಾಗೂ ಒಟ್ಟೂ ಸಮಾಜದೊಂದಿಗೆ ಸಂಸ್ಕೃತಿಯ ಸಂಪರ್ಕ — ಈ ವಿಷಯಗಳ ಬಗ್ಗೆ ಅಭ್ಯಾಸ, ಚರ್ಚೆ, ವಿಚಾರ ವಿನಿಮಯ ನಡೆಯುತ್ತದೆ. ಜತೆಗೆ ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳ ಉತ್ಸವ ನಡೆಯುತ್ತದೆ.

ಶಿಬಿರ ಪ್ರಾರಂಭವಾಗುವುದು ಒಟ್ಟೂ ಕಾರ್ಯಕ್ರಮದ ಸ್ಥೂಲಸ್ವರೂಪವನ್ನು ಪರಿಚಯಿಸುವ ಕಿರು ಅಧಿವೇಶನದಿಂದ. ಆಮೇಲಿನ ದಿನಗಳಲ್ಲಿ ರಂಗಭೂಮಿಯ ಬಗ್ಗೆ, ಸಂಗೀತ-ನೃತ್ಯ ಮಾಧ್ಯಮಗಳ ಬಗ್ಗೆ, ಸಾಹಿತ್ಯದ ವಿವಿಧ ಪ್ರಕಾರಗಳ ಬಗ್ಗೆ, ಚಲನಚಿತ್ರ ಸಹೃದಯತೆಯ ಬಗ್ಗೆ ಮತ್ತು ಒಟ್ಟೂ ಸಂಸ್ಕೃತಿ- ಸಂವಹನದ ಪ್ರಕ್ರಿಯೆಯ ಬಗ್ಗೆ ಉಪನ್ಯಾಸ-ಪ್ರಾತ್ಯಕ್ಷಿಕೆ-ಚರ್ಚೆಗಳು ನಡೆಯುತ್ತವೆ. ಪ್ರತಿಯೊಂದು ವಿಷಯದ ಬಗ್ಗೆ ಶಿಬಿರ ನಡೆಯುವಾಗಲೂ ಆಯಾ ಮಾಧ್ಯಮದ ಆಯ್ದ ಕೃತಿಗಳನ್ನು ಪ್ರಾಯೋಗಿಕವಾಗಿ ಬಳಸಿಕೊಳ್ಳಲಾಗುತ್ತದೆ. ಶಿಬಿರ ಪ್ರತಿನಿತ್ಯ ಬೆಳಿಗ್ಗೆ ೯ ಗಂಟೆಯಿಂದ ೧ ಗಂಟೆ ಹಾಗೂ ಮಧ್ಯಾಹ್ನ ೨-೩೦ರಿಂದ ೬ ರ ತನಕ ನಡೆಯುತ್ತದೆ.

ಇದಲ್ಲದೆ ಪ್ರತಿದಿನ ಸಂಜೆ ರಂಗಪ್ರದರ್ಶನ, ಸಂಗೀತ, ನೃತ್ಯ ಹಾಗೂ ಇನ್ನಿತರ ಕಾರ್ಯಕ್ರಮಗಳು ಶಿಬಿರಾರ್ಥಿಗಳು ಮತ್ತು ಸಾರ್ವಜನಿಕರಿಗಾಗಿ ಏರ್ಪಾಟಾಗಿರುತ್ತದೆ. ಸಂಜೆಯ ಹೊತ್ತು ನಡೆಯುವ ಈ ಸಾಂಸ್ಕೃತಿಕ ಕಾರ್ಯಕ್ರಮಗಳ ಸ್ಥೂಲ ವಿವರ ಮತ್ತು ಪರಿಚಯಗಳು ಮುಂದಿನ ಪುಟಗಳಲ್ಲಿವೆ.

**ಶಿಬಿರ ನಿರ್ದೇಶಕರು: ಡಾ. ಯು.ಆರ್. ಅನಂತಮೂರ್ತಿ**

To be printed on the Cover

ತೆರೆದ ಅಂಚೆ

ಶ್ರೀಮತಿ/ಶ್ರೀ.......................................................

.......................................................

.......................................................

.......................................................

ಅವರಿಗೆ

## ನೀನಾಸಮ್ ಸಂಸ್ಕೃತಿ ಶಿಬಿರ
## ಅಕ್ಟೋಬರ್ ೨೦೦೨
# ಆಹ್ವಾನ

---

ನೀನಾಸಮ್, ಹೆಗ್ಗೋಡು, ಸಾಗರ
ಶಿವಮೊಗ್ಗ ಜಿಲ್ಲೆ ೫೭೭ ೪೧೭

Third Cover

## ನೀನಾಸಮ್ ಸಂಸ್ಕೃತಿ ಶಿಬಿರ
## ಹಗಲಿನ ಕಾರ್ಯಕ್ರಮಗಳು


ಡಾ. ಯು.ಆರ್. ಅನಂತಮೂರ್ತಿ ಅವರು ನಿರ್ದೇಶಕರಾಗಿರುವ ಈ ಬಾರಿಯ ಶಿಬಿರವು 'ಭವಿಷ್ಯ ಚಿಂತನೆ' ಎಂಬ ವಿಷಯವನ್ನು ಕುರಿತು ಸ್ಥೂಲವಾಗಿ ಕೇಂದ್ರೀಕರಿಸುತ್ತದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ, ಕನ್ನಡ ಭಾಷೆ, ಕಾವ್ಯ, ರಂಗಭೂಮಿ, ಚಲನಚಿತ್ರ, ಶಿಲ್ಪಚಿತ್ರಕಲೆಗಳು, ನೃತ್ಯ, ಸಂಗೀತ -- ಮೊದಲಾದ ಮಾಧ್ಯಮಗಳ ಭವಿಷ್ಯದ ಸಾಧ್ಯತೆಗಳನ್ನು ಕುರಿತಾದ ಉಪನ್ಯಾಸಗಳು ಯೋಜಿತವಾಗಿವೆ. ಜತೆಗೆ, ವಿಜ್ಞಾನ ಮತ್ತು ತಂತ್ರಜ್ಞಾನ, ಕೃಷಿ, ಧರ್ಮ ಮತ್ತು ಧಾರ್ಮಿಕತೆ, ಸಮಾಜಶಾಸ್ತ್ರಗಳು ಇತ್ಯಾದಿ ಕ್ಷೇತ್ರಗಳ ಭವಿಷ್ಯಕ್ಕೆ ಸಂಬಂಧಿಸಿದ ಚರ್ಚೆ ಉಪನ್ಯಾಸಗಳೂ ಇರುತ್ತವೆ.

ಶ್ರೀ ಕೀರ್ತಿನಾಥ ಕುರ್ತಕೋಟಿ, ಶ್ರೀ ಅಶೋಕ ವಾಜಪೇಯಿ, ಡಾ. ಚಂದ್ರಶೇಖರ ಕಂಬಾರ, ಶ್ರೀ ಶಿವ ವಿಶ್ವನಾಥನ್, ಶ್ರೀ ಸಮೀಕ್ ಬ್ಯಾನರ್ಜಿ, ಶ್ರೀಮತಿ ಸುದೇಷ್ಣಾ ಬ್ಯಾನರ್ಜಿ, ಶ್ರೀ ನರಹರಿ ರಾವ್, ಶ್ರೀ ವಿವೇಕ ಧಾರೇಶ್ವರ, ಶ್ರೀ ಸತೀಶ್ ಆಳೇಕರ್, ಶ್ರೀ ಕೆ.ಎಚ್. ಶ್ರೀನಿವಾಸ್, ಶ್ರೀ ಉಲ್ಲಾಸ ಕಾರಂತ, ಶ್ರೀ ಯಶವಂತ ಡೋಂಗ್ರೆ, ಶ್ರೀ ಸದಾನಂದ್, ಶ್ರೀ ರಾಜಾರಾಮ ಹೆಗಡೆ, ಶ್ರೀ ಕೆ.ಎಸ್. ಪುಟ್ಟಣ್ಣಯ್ಯ, ಶ್ರೀ ಮನು ಚಕ್ರವರ್ತಿ, ಶ್ರೀ ಮೊಗಳ್ಳಿ ಗಣೇಶ್, ಶ್ರೀಮತಿ ವೈದೇಹಿ — ಮೊದಲಾದವರು ಈ ಎಲ್ಲ ಚರ್ಚೆ ಮತ್ತು ಉಪನ್ಯಾಸಗಳನ್ನು ನಡೆಸಲಿದ್ದಾರೆ.

ತಿರುಗಾಟ ನಾಟಕಗಳ ಚರ್ಚೆ-ವಿಶ್ಲೇಷಣೆಯೇ ಅಲ್ಲದೆ, ಕಾವ್ಯ, ಸಂಗೀತ, ನೃತ್ಯ, ಚಿತ್ರಕಲೆ ಮತ್ತು ಚಲನಚಿತ್ರಕ್ಕೆ ಸಂಬಂಧಿಸಿದ ರಸಗ್ರಹಣ ಕಾರ್ಯಕ್ರಮಗಳನ್ನೂ ಶಿಬಿರದಲ್ಲಿ ಸೇರಿಸಿಕೊಳ್ಳಲಾಗಿದೆ. ಶ್ರೀ ಭಾಸ್ಕರ ಚಂದಾವರ್ಕರ್, ಶ್ರೀ ಕಿ.ರಂ. ನಾಗರಾಜ್, ಶ್ರೀ ಭರತ್ ಶರ್ಮಾ, ಶ್ರೀಮತಿ ತ್ರಿಪುರಾ ಕಶ್ಯಪ್, ಶ್ರೀ ಗಿರೀಶ್ ಕಾಸರವಳ್ಳಿ, ಶ್ರೀ ಎಚ್.ಎಂ. ರಾಮಚಂದ್ರ, ಶ್ರೀ ಕೆ.ಟಿ. ಶಿವಪ್ರಸಾದ್ ಮೊದಲಾದವರು ಈ ಕಾರ್ಯಕ್ರಮಗಳನ್ನು ನಡೆಸಿಕೊಡಲಿದ್ದಾರೆ.

**ಅಕ್ಟೋಬರ್ ೧೩ ಭಾನುವಾರ**



ತಿರುಗಾಟ ನಾಟಕ

## ಸಂಸಾರದಲ್ಲಿ ಸನಿದಪ

ದಾರಿಯೋ ಫೋನ 'ವರ್ಚುವಸ್ ಬರ್ಗ್‌ಲರ್' ಆಧಾರ

ಸಂಗೀತ/ನಿರ್ದೇಶನ ಸಹಾಯ: ಶ್ರೀಧರ ಹೆಗ್ಗೋಡು

ವಿನ್ಯಾಸ: ಚನ್ನಕೇಶವ

ರೂಪಾಂತರ ಮತ್ತು ನಿರ್ದೇಶನ: ಅಕ್ಷರ ಕೆ.ವಿ.

ನೊಬೆಲ್ ಪ್ರಶಸ್ತಿ ವಿಜೇತ ಇಟಲಿಯ ನಾಟಕಕಾರ ದಾರಿಯೋ ಫೋನ 'ದಿ ವರ್ಚುವಸ್ ಬರ್ಗ್‌ಲರ್' ಕೃತಿಯ ಕನ್ನಡ ಮರುರೂಪ ಇದು. ಮನೆಯೊಂದಕ್ಕೆ ಕಳ್ಳನ ಪ್ರವೇಶದಿಂದ ಉಂಟಾಗುವ ಚಿತ್ರವಿಚಿತ್ರ ಬೆಳವಣಿಗೆಗಳನ್ನು ಕೇಂದ್ರವಾಗಿಟ್ಟುಕೊಂಡು ನಡೆಯುವ ಈ ನಾಟಕದ ಕಥನವು, ತುಂಬ ಲಘು ಧಾಟಿಯಲ್ಲೇ ಸಂಸಾರವನ್ನು ಕುರಿತ ಗಂಭೀರ ಚರ್ಚೆಗಳನ್ನು ಎತ್ತುತ್ತದೆ; ಕಳ್ಳ ಮತ್ತು ಸತ್ಯವಂತ, ವ್ಯಭಿಚಾರಿ ಮತ್ತು ಸಂಸಾರಸ್ಥ, ತಿಳುವಳಿಕೆ ಮತ್ತು ತಪ್ಪು ತಿಳುವಳಿಕೆ – ಮೊದಲಾದ ಮೌಲ್ಯಗಳು ತಲೆಕೆಳಗಾಗುತ್ತಹೋಗುವ ಚೋದ್ಯವನ್ನು ನಾಟಕವು ವ್ಯಂಗ್ಯದ ಮೊನಚಿನೊಂದಿಗೆ ನಮ್ಮೆದುರಿಗೆ ಬಿಚ್ಚುತ್ತ ಹೋಗುತ್ತದೆ. ಪ್ರಸ್ತುತ ರೂಪಾಂತರವು ತುಂಬ ಸ್ವಾತಂತ್ರ್ಯವಹಿಸಿ ಈ ನಾಟಕವನ್ನು ನಮ್ಮದೇ ಸಾಂಸ್ಕೃತಿಕ ಸಂದರ್ಭದಲ್ಲಿ ಪುನರ್‌ಕಥಿಸಲು ಹೊರಟಿದೆ.


ಪ್ರಾಯೋಜನೆ

**ದಿ. ಶ್ರೀ ಕಾಶಿ ಮಂಜಭಟ್ ಅವರ ನೆನಪಿಗೆ**

**ಭಾ.ಮ. ಶಿಕ್ಷಣ ಮತ್ತು ಸಾಂಸ್ಕೃತಿಕ ವೇದಿಕೆ, ಶಿವಮೊಗ್ಗ**



**ಅಕ್ಟೋಬರ್ ೧೪ ಸೋಮವಾರ**



ತಿರುಗಾಟ ನಾಟಕ

## ಮಂತ್ರಶಕ್ತಿ

ರಚನೆ: ಸಂಸ

ಸಂಗೀತ: ಶ್ರೀಧರ ಹೆಗ್ಗೋಡು,

ವಿನ್ಯಾಸ ಮತ್ತು ನಿರ್ದೇಶನ: ಚನ್ನಕೇಶವ

ಮೈಸೂರು ಅರಸರ ಚರಿತ್ರೆಯನ್ನು ಆಧರಿಸಿ ಕನ್ನಡದ ಪ್ರಸಿದ್ಧ ನಾಟಕಕಾರ ಸಂಸ ಅವರು ಬರೆದ ನಾಟಕಸರಣಿಯಲ್ಲಿ ಕಡೆಯ ನಾಟಕ ಇದು. ೧೭ನೆಯ ಶತಮಾನದಲ್ಲಿ, ಮೈಸೂರು ಸಂಸ್ಥಾನದ ಒಳಗೆ ಮತ್ತು ಅದರ ವಿರುದ್ಧ ಸಂಭವಿಸತೊಡಗಿದ್ದ ಹಲವಾರು ರೀತಿಯ ಷಡ್ಯಂತ್ರಗಳು ಈ ನಾಟಕದ ಕೇಂದ್ರ ಕಥಾನಕ. ಒಂದು ಕಡೆಗೆ, ಮಧುರೆಯ ತಿರುಮಲನಾಯಕನ ಕಡೆಯಿಂದ ನಡೆಯುತ್ತಿದ್ದ ರಾಜಕೀಯ ಕುತಂತ್ರ, ಇನ್ನೊಂದು ಕಡೆಗೆ, ಸಿಂಹಾಸನವು ವಿಜಯನಗರ ಸಾಮ್ರಾಜ್ಯಕ್ಕೆ ಸೇರಬೇಕೆ ಎಂಬ ಜಿಜ್ಞಾಸೆ ಮತ್ತು ಇದೆಲ್ಲದರ ಜತೆಗೆ, ಗುಂಡಪ್ಪ ಜೋಯಿಸನಂಥ ಆಸ್ಥಾನದ ಹಳೆಯಪೈಕದವರ ಸ್ಥಳೀಯ ರಾಜಕಾರಣ – ಇವೆಲ್ಲದರ ನಡುವೆ ರಾಜನಾದ ರಣಧೀರನು ಅವೆಲ್ಲವನ್ನೂ ಹೇಗೆ ಬಗೆಬಗೆಯಿಂದ ಗೆದ್ದು ಈ ಸಂಸ್ಥಾನವನ್ನು ಕಟ್ಟುತ್ತಾನೆ ಎಂಬುದನ್ನು ನಾಟಕೀಯವಾಗಿ ನಿರೂಪಿಸುವ ಕೃತಿ ಇದು.


ಪ್ರಾಯೋಜನೆ

**ಮಲೆನಾಡು ಅರೆಕಾನಟ್ ಸಿಂಡಿಕೇಟ್**

**ಶಿವಮೊಗ್ಗ**



**ಅಕ್ಟೋಬರ್ ೧೫ ಮಂಗಳವಾರ**



ತಿರುಗಾಟ ನಾಟಕ

## ಚೋರ ಚರಣದಾಸ

ರಚನೆ: ಹಬೀಬ್ ತನ್ವೀರ್

ಅನುವಾದ: ಸಿದ್ದಲಿಂಗ ಪಟ್ಟಣಶೆಟ್ಟಿ

ನಿರ್ದೇಶನ: ಸುರೇಶ ಆನಗಳ್ಳಿ


ಆಧುನಿಕ ಭಾರತದ ಪ್ರಮುಖ ರಂಗಕರ್ಮಿ ಹಬೀಬ್ ತನ್‌ವೀರ್ ಅವರ ಪ್ರಸಿದ್ಧ ಹಿಂದಿ ನಾಟಕದ ಕನ್ನಡಾನುವಾದ ಇದು. ಚರಣದಾಸ ಎಂಬ ಕಳ್ಳ, ತನ್ನ ಚಾಣಾಕ್ಷತೆಯಿಂದ ಪೋಲೀಸರಿಗೆ ಚಳ್ಳೆಹಣ್ಣು ತಿನ್ನಿಸುತ್ತ, ಬಡವರಿಗೆ ಸಹಾಯ ಮಾಡುತ್ತ, ಒಬ್ಬ 'ಜನಪ್ರಿಯ' ಚೋರನಾಗಿ ಬೆಳೆಯುವ ಜಾನಪದ ಕಥಾನಕವೊಂದನ್ನು ಈ ನಾಟಕ ಕೇಂದ್ರವಾಗಿಟ್ಟುಕೊಂಡಿದೆ. ತನ್ನ ಈ ಕಾಯಕದಲ್ಲಿ ಚರಣದಾಸ ಸರ್ಕಾರವನ್ನೇ ಮೋಸದಲ್ಲಿ ಕೆಡವಿ ರಾಣಿಯನ್ನೇ ಮರುಳು ಮಾಡುತ್ತಾನೆ. ಆದರೆ, ಕಡೆಯಲ್ಲಿ ಆತ ತನ್ನ ಗುರುವಿಗೆ ನೀಡಿದ್ದ ಸತ್ಯವಂತಿಕೆಯ ಒಂದು ವಚನ ಆತನಿಗೆ ಎರವಾಗುತ್ತದೆ; ಅದೇ ಆತನ ಸಾವಿಗೂ ಕಾರಣವಾಗುತ್ತದೆ – ಹೀಗೆ ಸರಳ ಜಾನಪದ ಕಥೆಯೊಂದರ ಮೂಲಕ ಹಲವು ರೀತಿಯ ಆಧುನಿಕ ಅರ್ಥಗಳನ್ನೂ ಸಮಕಾಲೀನ ಧ್ವನಿಗಳನ್ನೂ ಉದ್ಬೋಧಿಸುವ ಪ್ರಯೋಗವನ್ನು ಈ ಕೃತಿ ಮಾಡುತ್ತದೆ.

ಪ್ರಾಯೋಜನೆ

**ಇಬ್ಬರು ಸಹೃದಯ ಮಿತ್ರರು**

**ಶಿವಮೊಗ್ಗ**

## ಅಕ್ಟೋಬರ್ ೧೭ ಬುಧವಾರ



ಹಿಂದುಸ್ತಾನಿ ಗಾಯನ

### ಶ್ರೀ ಶ್ರೀಪಾದ ಹೆಗಡೆ

ಧಾರವಾಡ – ಅವರಿಂದ

ಉತ್ತರ ಕನ್ನಡ ಜಿಲ್ಲೆಯಲ್ಲಿ, ಯಕ್ಷಗಾನದ ಹಿನ್ನೆಲೆಯಿರುವ ಕುಟುಂಬದಲ್ಲಿ ಜನಿಸಿದ ಶ್ರೀಪಾದ ಹೆಗಡೆ ಅವರು ಬಾಲ್ಯದಿಂದಲೇ ಸಂಗೀತದ ಬಗ್ಗೆ ವಿಶೇಷ ಒಲವು ಇಟ್ಟುಕೊಂಡಿದ್ದವರು. ಮೊದಲು ಅವರು ಶ್ರೀ ಗಣಪತಿ ಭಟ್ ಹಾಸಣಗಿ ಅವರಲ್ಲಿ ಮತ್ತು ಆಮೇಲೆ ಹಿಂದುಸ್ತಾನಿ ಸಂಗೀತದ ದಿಗ್ಗಜರಾದ ಪಂಡಿತ ಬಸವರಾಜ ರಾಜಗುರು ಅವರಲ್ಲಿ ಅಭ್ಯಾಸ ಮಾಡಿದ್ದಾರೆ. ಕಿರಾಣಾ ಮತ್ತು ಗ್ವಾಲಿಯರ್ ಘರಾನಾಗಳ ಸಂಗೀತ ಶೈಲಿಗಳನ್ನು ಸಂಶ್ಲೇಷಣೆ ಮಾಡಿಕೊಂಡಿರುವ ಶ್ರೀಪಾದ ಹೆಗಡೆಯವರಿಗೆ ಒಳ್ಳೆಯ ಕಂಠ ಮತ್ತು ಸತತ ಪರಿಶ್ರಮಗಳ ಬೆಂಬಲವೂ ಇದೆ. ಪ್ರಸ್ತುತ ಧಾರವಾಡ ಆಕಾಶವಾಣಿಯಲ್ಲಿ ಕೆಲಸ ಮಾಡುತ್ತಿರುವ ಇವರು ಆಕಾಶವಾಣಿಯಲ್ಲದೆ ಬೆಂಗಳೂರು, ಗೋವಾ, ಮುಂಬಯಿ ಮೊದಲಾದ ಹಲವು ಊರುಗಳಲ್ಲಿ ಸಂಗೀತ ಕಛೇರಿಗಳನ್ನು ನಡೆಸಿದ್ದಾರೆ. ಆರ್ಯಭಟ ಪ್ರಶಸ್ತಿ ಇವರಿಗೆ ದೊರಕಿದೆ.

ಕಾರ್ಯಕ್ರಮದಲ್ಲಿ ಅವರ ಸಾಥಿಗಳು – ಪಂ. ವಸಂತ ಕನಕಾಪುರ (ಹಾರ್ಮೋನಿಯಂ) ಹಾಗೂ ಪಂ. ರಘುನಾಥ ನಾಕೋಡ (ತಬಲಾ).


ಪ್ರಾಯೋಜನೆ

**ಶ್ರೀ ಬಿ.ಎಸ್. ಯಡಿಯೂರಪ್ಪ**

**ವಿಧಾನಪರಿಷತ್ ಸದಸ್ಯರು, ಶಿಕಾರಿಪುರ**



## ಅಕ್ಟೋಬರ್ ೧೮ ಗುರುವಾರ



ನೃತ್ಯ ಕಾರ್ಯಕ್ರಮ

### ನೃತ್ಯಗ್ರಾಮ ಕಲಾವಿದರು

ಬೆಂಗಳೂರು – ಅವರಿಂದ

ಭಾರತದ ಶಾಸ್ತ್ರೀಯ ನೃತ್ಯಮಾಧ್ಯಮಗಳ ಬಗ್ಗೆ ಅಧ್ಯಯನ, ಶಿಕ್ಷಣ ಮತ್ತು ಅಭ್ಯಾಸಗಳನ್ನು ನಡೆಸುವ ಉದ್ದೇಶವನ್ನು ಗುರಿಯಾಗಿ ಇಟ್ಟುಕೊಂಡು, ೧೯೯೦ರಲ್ಲಿ, ದಿ. ಪ್ರೊತಿಮಾ ಗೌರಿ ಅವರಿಂದ ಬೆಂಗಳೂರಿನ ಸಮೀಪದ ಹೇಸರಘಟ್ಟದಲ್ಲಿ ಸ್ಥಾಪಿತವಾದ ಪ್ರಸಿದ್ಧ ಸಂಸ್ಥೆ – ನೃತ್ಯಗ್ರಾಮ. ಅಲ್ಲಿ ಪರಿಣತ ಕಲಾವಿದರಿಂದ ನೃತ್ಯಶಿಕ್ಷಣ ಮತ್ತು ನೃತ್ಯೋತ್ಸವಗಳು ಸತತವಾಗಿ ನಡೆಯುತ್ತಿರುವುದೇ ಅಲ್ಲದೆ ಆಗಾಗ, ನೃತ್ಯಮಾಧ್ಯಮದ ಸಾಧನೆಗಳನ್ನು ಜನಸಮುದಾಯಕ್ಕೆ ಪರಿಚಯಿಸುವ ಉದ್ದೇಶದಿಂದ, ಆ ಸಂಸ್ಥೆಯ ಆಯ್ದ ಕಲಾವಿದರ ತಂಡವು ಪ್ರವಾಸ ಪ್ರದರ್ಶನಗಳನ್ನು ಕೊಡುವ ರೂಢಿಯೂ ಇದೆ.

ಪ್ರಸ್ತುತ ಕಾರ್ಯಕ್ರಮದಲ್ಲಿ ನೃತ್ಯಗ್ರಾಮದ ಪ್ರಮುಖ ಕಲಾವಿದರಾದ ಶ್ರೀಮತಿ ಸುರೂಪಾ ಸೇನ್ ಮತ್ತು ಬಿಜಯಿನಿ ಸತ್ಪಥಿ ಅವರೂ ಮತ್ತು ಅವರ ಬಳಿ ನೃತ್ಯಾಭ್ಯಾಸ ಮಾಡುತ್ತಿರುವ ಕಲಾವಿದರ ತಂಡವೂ ಭಾಗವಹಿಸಲಿದೆ. ಆ ತಂಡದ ವಿವಿಧ ಕೃತಿಗಳಿಂದ ಆಯ್ದ ಭಾಗಗಳನ್ನು ಕೂಡಿಸಿ ಪ್ರಸ್ತುತ ಕಾರ್ಯಕ್ರಮವನ್ನು ರೂಪಿಸಲಾಗಿದೆ.


ಪ್ರಾಯೋಜನೆ

**ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ**

**ಬೆಂಗಳೂರು**



## ಅಕ್ಟೋಬರ್ ೧೯ ಶುಕ್ರವಾರ



ನೃತ್ಯ ಕಾರ್ಯಕ್ರಮ

### ಸ್ಟೆಮ್ ಡಾನ್ಸ್ ಥಿಯೇಟರ್

ಬೆಂಗಳೂರು – ತಂಡದ ಕಲಾವಿದರಿಂದ

ಆಧುನಿಕ ನೃತ್ಯಕ್ಷೇತ್ರದಲ್ಲಿ ಹೊಸ ಪ್ರಯೋಗಶೀಲತೆಯನ್ನು ನಡೆಸುವ ಉದ್ದೇಶವಿಟ್ಟುಕೊಂಡು ೧೯೮೫ರಲ್ಲಿ ಬೆಂಗಳೂರಿನಲ್ಲಿ ಆರಂಭವಾದ ಈ ಸಂಸ್ಥೆಯು ಭಾರತೀಯ ಮತ್ತು ಪಾಶ್ಚಿಮಾತ್ಯ ನರ್ತನ ಮಾದರಿಗಳನ್ನೂ ತರಬೇತಿ ವಿಧಾನಗಳನ್ನೂ ಕೂಡಿಸಿಕೊಂಡು ತನ್ನ ವಿಶಿಷ್ಟ ಪ್ರಯೋಗಗಳನ್ನು ರೂಪಿಸಿಕೊಂಡಿದೆ. ಪ್ರಸಿದ್ಧ ಕಥಕ್ ನೃತ್ಯಗಾರ್ತಿ ಶ್ರೀಮತಿ ಮಾಯಾ ರಾವ್ ಅವರ ಪುತ್ರಿಯೂ ಶಿಷ್ಯೆಯೂ ಆದ ಮಧು ನಟರಾಜ್ ಹೇರಿ ಅವರು ಈ ಸಂಸ್ಥೆಯ ಮುಖ್ಯಸ್ಥರಾಗಿದ್ದು ಹಲವು ಜನ ಯುವ ಕಲಾವಿದರು ಈ ಸಂಸ್ಥೆಯ ಪ್ರಯೋಗಗಳಲ್ಲಿ ಪಾಲ್ಗೊಳ್ಳುತ್ತಾರೆ. ಇದುವರೆಗೆ ಸುಮಾರು ಹತ್ತು ಪ್ರಯೋಗಗಳನ್ನು ರಂಗದ ಮೇಲೆ ತಂದಿರುವ ಈ ತಂಡವು ರಾಷ್ಟ್ರದ ಹಲವಾರು ನಗರಗಳಲ್ಲೂ ಅಮೇರಿಕಾ ಯುರೋಪ್ ಸೇರಿದಂತೆ ವಿದೇಶಗಳಲ್ಲಿಯೂ ಪ್ರವಾಸ-ಪ್ರದರ್ಶನಗಳನ್ನು ಕೊಟ್ಟಿದೆ.

ಪ್ರಸ್ತುತ ಕಾರ್ಯಕ್ರಮದಲ್ಲಿ, ಇದುವರೆಗಿನ ಅವರ ವಿವಿಧ ನೃತ್ಯ ಪ್ರಯೋಗಗಳಿಂದ ಆಯ್ದ ನೃತ್ಯಭಾಗಗಳನ್ನು ಪ್ರಸ್ತುತಪಡಿಸಲಾಗುತ್ತದೆ.

ಪ್ರಾಯೋಜನೆ

**ಕರ್ನಾಟಕ ಬ್ಯಾಂಕ್ ಲಿಮಿಟೆಡ್**

**ಪ್ರಧಾನ ಕಛೇರಿ: ಮಂಗಳೂರು**

## ಅಕ್ಟೋಬರ್ ೧೯ ಶನಿವಾರ

ಹರಿಕಥೆ ಕಾರ್ಯಕ್ರಮ

# ಸಂತ ಭದ್ರಗಿರಿ ಅಚ್ಯುತದಾಸ್‌ಜೀ

ಅವರಿಂದ

೧೯೩೨ರಲ್ಲಿ, ಉಡುಪಿ ಜಿಲ್ಲೆಯ ಭದ್ರಗಿರಿಯಲ್ಲಿ ಜನಿಸಿದ ಅಚ್ಯುತ ದಾಸಜೀ ಅವರು ಕರ್ನಾಟಕದಲ್ಲಿ ಬಹು ಪ್ರಸಿದ್ಧರಾದ ಕೀರ್ತನ ಕಾರರು. ಕರ್ನಾಟಕದ ಅಸಂಖ್ಯ ಊರುಗಳಲ್ಲಿ ಮತ್ತು ರಾಜ್ಯದ ಹೊರಗಿನ ಅನೇಕ ಗಣ್ಯ ಸ್ಥಳಗಳಲ್ಲಿ ಬಹುಸಂಖ್ಯೆಯ ಹರಿಕಥಾ ಕಾರ್ಯಕ್ರಮಗಳನ್ನು ನೀಡಿರುವ ಇವರು ಕನ್ನಡ, ಮರಾಠಿ, ತುಳು, ಕೊಂಕಣಿ, ಹಿಂದಿ ಭಾಷೆಗಳೆಲ್ಲದರಲ್ಲೂ ತಮ್ಮ ಕಾರ್ಯಕ್ರಮಗಳನ್ನು ನಡೆಸಿದ್ದಾರೆ. ಜತೆಗೆ, ಕೀರ್ತನ ಕಲೆಯ ಶಿಕ್ಷಣ ಮತ್ತು ಪ್ರಚಾರಕ್ಕಾಗಿ ಇದುವರೆಗೆ ಅವರು ಹಲವಾರು ಸಮ್ಮೇಳನಗಳನ್ನೂ ತರಬೇತಿ ಶಿಬಿರಗಳನ್ನೂ ಉಪನ್ಯಾಸಗಳನ್ನೂ ನಡೆಸಿದ್ದಾರೆ; ಕೀರ್ತನಕಲೆಯ ಬಗ್ಗೆ ಇವರ ಹಲವಾರು ಪುಸ್ತಕಗಳೂ ಪ್ರಕಟವಾಗಿವೆ.

ಅನೇಕಾನೇಕ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳಿಂದ ಪುರಸ್ಕಾರ ಪಡೆದಿರುವ ಇವರಿಗೆ ರಾಜ್ಯ ಪ್ರಶಸ್ತಿ ಮತ್ತು ಸಂಗೀತ ನೃತ್ಯ ಅಕಾಡೆಮಿ ಗೌರವಗಳು ಸಂದಿವೆ. ಇವರ ಕೀರ್ತನಾ ಕಾರ್ಯಕ್ರಮಗಳ ಧ್ವನಿಸುರುಳಿಗಳು ಕೂಡಾ ನಾಡಿನಾದ್ಯಂತ ತುಂಬ ಜನಪ್ರಿಯವಾಗಿವೆ.

ಪ್ರಾಯೋಜನೆ
**ಶ್ರೀ ಗುರುರಾಜ ಕಾಫಿ ವರ್ಕ್ಸ್**
**ಸಾಗರ**



## ಅಕ್ಟೋಬರ್ ೨೦ ಭಾನುವಾರ

ವಿಶೇಷ ಸಂಗೀತ ಕಾರ್ಯಕ್ರಮ

# ಮದ್ರಾಸ್ ಸ್ಟ್ರಿಂಗ್ ಕ್ವಾರ್ಟ್ರೆಟ್

ತಂಡದವರಿಂದ

ಪಾಶ್ಚಿಮಾತ್ಯ ಶಾಸ್ತ್ರೀಯ ಸಂಗೀತವನ್ನು ಅದರ ಸಂಕೀರ್ಣತೆಗಳೊಂದಿಗೆ ಗ್ರಹಿಸಿ ಪ್ರಯೋಗಿಸಬೇಕು ಮತ್ತು ಅದನ್ನು ಭಾರತೀಯ ಸಂಗೀತ ದೊಂದಿಗೆ ಮುಖಾಮುಖಿಯಾಗಿಸುವ ಹೊಸ ಪ್ರಯತ್ನಗಳನ್ನು ನಡೆಸಬೇಕೆಂಬ ಉದ್ದೇಶವಿಟ್ಟುಕೊಂಡು ೧೯೩ರಲ್ಲಿ ಮದರಾಸಿನಲ್ಲಿ ಆರಂಭವಾದ ಸಂಸ್ಥೆ – ಮದ್ರಾಸ್ ಸ್ಟ್ರಿಂಗ್ ಕ್ವಾರ್ಟ್ರೆಟ್. ನಾಲ್ಕೇ ಜನರ ಈ ತಂಡದ ಎಲ್ಲ ಸದಸ್ಯರೂ ಶಾಸ್ತ್ರೀಯ ಸಂಗೀತದ ಹಿನ್ನೆಲೆಯಿರುವ ಕುಟುಂಬಗಳಿಂದ ಬಂದವರು; ಪ್ರಸ್ತುತ, ಚಲನಚಿತ್ರಸಂಗೀತಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರು. ಆದರೆ, ತಮ್ಮ ಸ್ವಂತ ಕಲಾತ್ಮಕ ತುರ್ತಿನ ಹುಡುಕಾಟಗಳಿಗಾಗಿ ಪ್ರತಿ ಭಾನುವಾರ ಸೇರಿ ಅವರು ನಡೆಸುವ ಪ್ರಯೋಗಗಳು ಈ ತಂಡದ ಕೃತಿಗಳಾಗಿ ಮೈದಾಳಿವೆ. ಅಂಥ ಕೆಲವು ಕೃತಿಭಾಗಗಳನ್ನೇ ಈ ಕಾರ್ಯಕ್ರಮದಲ್ಲಿ ಸಾದರ ಪಡಿಸಲಾಗುತ್ತಿದೆ.

ಈ ತಂಡದಲ್ಲಿರುವ ನಾಲ್ವರು ಕಲಾವಿದರು – ವಯೋಲಿನ್: ವಿ.ಎಸ್. ನರಸಿಂಹನ್ ಮತ್ತು ಹೇಮಂತರಾಜ್ ಮುಳಿಯಿಲ್; ವಯೋಲಾ: ಬಿ.ಜೆ. ಚಂದ್ರನ್ ಮತ್ತು ಸೆಲ್ಲೋ: ವಿ.ಆರ್. ಶೇಖರ್.

ಪ್ರಾಯೋಜನೆ
**ಸಂಸ್ಕೃತಿ ಭಾರತಿ ಪ್ರತಿಷ್ಠಾನ**
**ದೆಹಲಿ**



# NINASAM

Heggodu, Sagara Tq.,Shimoga Dist.,
Karnataka 577 417
Ph: 0818-365646 Fax: 0818-365673

We are grateful to
the following organisations
for their kind sponsorship support
for the cultural festival:

**Bha.Ma.**
**Shikshana mattu Samskritika Vedike**
Shimoga

**Malnad Arecanut Syndicate**
Shimoga

**Two Friends**
Shimoga

**Sri. B.S. Yediyoorappa and Sons,**
Shikaripura

**Karnataka State Tourism**
**Development Corporation Ltd.**
Bangalore

**Karnataka Bank Ltd.**
H.O. Mangalore

**Sri. Gururaja Coffee Works**
Sagara.

**Sanskriti Bharti Trust**
Delhi